ಪಾನು ಮಾಡಬೇಕಾಗುತ್ತದೆ ಎಫಿಷಿಯೆನ್ಸಿ ಮೇಂಟೇನ್ ಮಾಡಲೇ ಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಸೂಚಿಸಿರತಕ್ಕ ಇನ್ ಎಫಿಷಿಯೆನ್ಸಿ ಮಾಡತಕ್ಕ ಕ್ರಮಕ್ಕೆ ಸರ್ಕಾರ ಪುರಸ್ಕಾರ ಕೊಡುವುದಕಾ ಗುವುದಿಲ್ಲ.

2-00 P. M.

PAPERS LAID ON THE TABLE

SRI N. HUTCHAMASTHY GOWDA (Minister for Revenue).—I beg to lay:

(i) Order No. 20 ESI 77 dated 4th April, 1977 Remission of Stamp Duties in respect of instrument executed by Malleswaram Enterprising Womens' Society (Reg) Ladies Club, Bangalore under Section 9 (2) of Karnataka Stamp Act, 1957.

(ii) Notification No. RDV 185/76-77 dated 24th March 1977 Suspension of Land Revenue in Bellary District for the year 1976-77 Under Section 194(2) of the Karnataka Land Revenue Act, 1964.

SRI K. H. RANGANATH (Minister for Co-operation) —I beg to lay:

(i) Notification No. RDC 202 CFA 76 dated 25th Februaty, 1977 Amendment to Notification No. RDC 202 CEA 76 dated 2nd February 1976 ;

(ii) Order No. REC 483 CLS 76 dated 21st March, 1977 Modifications to Order No. RDC 462 CLS 76 Dated 9th December, 1976 ;

Under Section 130 of the Co-operative Societies Act, 1959,

MADAM SPEAKER —All the Papers are laid.

ಶ್ರೀ ಸಿ. ಬೈರೇಗೌಡ.—ಮೊದಲು ನೋಟಿಫಿಕೇಷನ್‌ಲೇ ಮಾಡುವಾಗ ರಿಗಾರ್ಡಿಂಗ್ ನೂಪರ್‌ಷೆಷನ್ ಆಫ್ ಕುಂದಾಪುರ ಮುನಿಸಿಪಾಲಟಿ ಎಂದು ಕೊಡುತ್ತಿದ್ದರು. ಈಗ ನೋಟಿಫಿಕೇಷನ್ ಮಾಡುವಾಗ ಒಂದು ಹೊಸ ತಂತ್ರವನ್ನು ಅನುಸರಿಸುತ್ತಿದ್ದಾರೆ. ಈಗ ಬರೀ ನೋಟಿಫಿಕೇಷನ್ ನಂಬರ್ ಮಾತ್ರ ಕೊಡುತ್ತಿದ್ದಾರೆ.

ಅಧ್ಯಕ್ಷರು.—ಮೊದಲು ಅದನ್ನು ಕೊಡುವುದಿಲ್ಲ. ಒಂದುವೇಳೆ ಕೊಟ್ಟರೆ ತಪ್ಪಿಲ್ಲ. ಈಗ ಕೊಟ್ಟಿರತಕ್ಕ ನೋಟಿಫಿಕೇಷನ್ ನಂಬರ್ ನೋಡಿಕೊಂಡು ಮಾನ್ಯ ಸದಸ್ಯರು ಯಾವುದು ಸರಿ ಇದೆ ಎಂಬುದನ್ನು ನೋಡುವುದಕ್ಕೆ ಅವಕಾಶವಾಗಲಿ ಎನ್ನುವ ಒಂದು ದೃಷ್ಟಿಯಿಂದ ಈಗ ನೋಟಿಫಿಕೇಷನ್ ನಂಬರ್ ಕೊಟ್ಟಿದೆ. ಇದರಲ್ಲಿ ತಪ್ಪೇನೂ ಇಲ್ಲ.

Taking up notice under rule 312

(i) re:—remarks of the Chief Justice about two Ministers

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು 312ನೇ ರೂಲ್ ಪ್ರಕಾರ ಹೈಕೋರ್ಟ್ ನ್ಯಾಯಾಧೀಶರು ಇಬ್ಬರು ಮಂತ್ರಿಗಳ ಬಗ್ಗೆ ಹೇಳಿರುವ ವಿಷಯಕ್ಕೆ ಸಂಬಂಧ ಪಟ್ಟಂತೆ ಒಂದು ನೋಟಿಸನ್ನು ತಮಗೆ ಕಳುಹಿಸಿಕೊಟ್ಟಿದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.